**ಸರ್ವ ಶಿಕ್ಷಣ ಅಭಿಯಾನ**
ಕರ್ನಾಟಕ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ: ಸ.ಶಿ.ಇ/.ಕೆ.ಜಿ.ಬಿ.ವಿ/163/2012–13 ದಿನಾಂಕ:31.01.2013

## ಸುತ್ತೋಲೆ

**ವಿಷಯ:** ಹೆಣ್ಣು ಮಕ್ಕಳ ಶಿಕ್ಷಣ ಕಾರ್ಯಾತಂತ್ರದಡಿ ಕೆ.ಕೆ.ಜಿ.ಬಿ.ವಿ ಮತ್ತು ಕೆ.ಜಿ.ಬಿ.ವಿ ವಸತಿಶಾಲೆಗಳಲ್ಲಿ ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಭದ್ರತೆ ಕುರಿತು ಕ್ರಮ ತೆಗೆದುಕೊಳ್ಳುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ಮಾರ್ಗಸೂಚಿಯ ಪತ್ರದ ಸಂಖ್ಯೆ: ಸ.ಶಿ.ಅ /ಹೆ.ಶಿ/ ಕೆ.ಜಿ.ಬಿ.ವಿ.ಮಾರ್ಗಸೂಚಿ/10–11/11–12 ದಿನಾಂಕ: 25.8.2012

2) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಇ/ಕೆ.ಜಿ.ಬಿ.ವಿ/163/2012–13 ದಿನಾಂಕ:17.7.2012

ಕೆ.ಜಿ.ಬಿ.ವಿ. ಮತ್ತು ಕರ್ನಾಟಕ ಕೆ.ಜಿ.ಬಿ.ವಿ. ವಸತಿಶಾಲೆಗಳು ಮತ್ತು ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಸದರಿ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಉಲ್ಲೇಖಿತ ಸುತ್ತೋಲೆಗಳು ಹಾಗೂ ಈ ಕಛೇರಿಯ ಹಲವಾರು ಸಭೆಗಳಲ್ಲಿ ತಿಳಿಸಲಾಗಿದೆ. ಮುಂದುವರೆದು ಸದರಿ ವಸತಿಶಾಲೆಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಲ್ಲಿ ಎಲ್ಲಾ ಕೆ.ಜಿ.ಬಿ.ವಿ. ಮತ್ತು ಕೆ.ಕೆ.ಜಿ.ಬಿ.ವಿ.ಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ವಸತಿ ಶಾಲೆಗಳಲ್ಲಿ/ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರಗಳನ್ನು ಸ್ಥಳೀಯ ಪೋಲಿಸ್ ಠಾಣೆಗೆ ನೀಡಿ ಭದ್ರತೆಯನ್ನು ನೀಡುವಂತೆ ಮನವಿ ಸಲ್ಲಿಸುವುದು.
2. ಕೆ.ಜಿ.ಬಿ.ವಿ ಮತ್ತು ಕೆ.ಕೆ.ಜಿ.ಬಿ.ವಿ. ವಸತಿ/ನಿಲಯಗಳಲ್ಲಿ **"ಪಾಯಿಂಟ್ ಬುಕ್"** ವ್ಯವಸ್ಥೆಯನ್ನು ಹಾಗೂ ಗಸ್ತು ವ್ಯವಸ್ಥೆಯನ್ನು ಏರ್ಪಡಿಸುವಂತೆ ಪೋಲಿಸ್ ಠಾಣೆಯಲ್ಲಿ ಕೋರುವುದು.
3. ಎಲ್ಲಾ ವಿದ್ಯಾರ್ಥಿನಿಯರಿಗೆ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸುವುದು.
4. ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣೆ ದೃಷ್ಟಿಯಿಂದ ಕರಾಟೆ ಮುಂತಾದ ಚಟುವಟಿಕೆಗಳಲ್ಲಿ ತರಬೇತಿ ನೀಡುವುದು.
5. ವಿದ್ಯಾರ್ಥಿನಿಯರಿಗೆ ಮುಂಬರುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
6. ಪ್ರವೇಶ ದ್ವಾರಗಳಲ್ಲಿ ಸಿ.ಸಿ.ಟಿ.ವಿ.ಗಳನ್ನು ಅಳವಡಿಸಲು ಕ್ರಮವಹಿಸುವುದು.
7. ಕಾವಲುಗಾರರನ್ನು ಕಡ್ಡಾಯವಾಗಿ ನೇಮಕ ಮಾಡಿಕೊಳ್ಳುವುದು.
8. Gender Sensitization ಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
9. ಪ್ರತಿ ಕೆ.ಜಿ.ಬಿ.ವಿ. ಹಂತದಲ್ಲಿ ವಿದ್ಯಾರ್ಥಿನಿಯರ ಭದ್ರತೆ ಮತ್ತು ಸುರಕ್ಷತಾ ಕಮಿಟಿಗಳನ್ನು ಎಸ್.ಡಿ.ಎಂ.ಸಿ.ಗಳ ನೇತೃತ್ವದಲ್ಲಿ ರಚನೆ ಮಾಡುವುದು.
10. ಬಿ.ಇ.ಓ ರವರ ಮಟ್ಟದಲ್ಲಿ ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಆಡಳಿತರವರ ನೇತೃತ್ವದಲ್ಲಿ ಜಿಲ್ಲಾ ವಿದ್ಯಾರ್ಥಿನಿಯರ ಭದ್ರತೆ ಮತ್ತ ಸುರಕ್ಷತಾ ಕಮಿಟಿಗಳನ್ನು ರಚನೆ ಮಾಡುವುದು.
11. ಮೇಲ್ಕಂಡ ಸಮಿತಿಗಳು ಕನಿಷ್ಠ ತಿಂಗಳಿಗೆ ಒಂದು ಬಾರಿ ಸಭೆ ನಡೆಸಿ ವಿದ್ಯಾರ್ಥಿನಿಯರ ಭದ್ರತೆ ಮತ್ತು ಸುರಕ್ಷತೆ ದೃಷ್ಟಿಯಿಂದ ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳುವುದು ಹಾಗೂ ಅನುಷ್ಠಾನಗೊಳಿಸುವುದು.

12. ವಾರ್ಡನ್ ಮತ್ತು ಮುಖ್ಯ ಶಿಕ್ಷಕರ ಮೊಬೈಲ್ ಫೋನ್ ನಂಬರ್ ಅನ್ನು ಎಲ್ಲಾ ವಿದ್ಯಾರ್ಥಿನಿಯರಿಗೂ ನೀಡುವುದು.
13. ವಸತಿ ಶಾಲೆಗಳಲ್ಲಿ ಸ್ಥಿರ ದೂರವಾಣಿ ಸೌಲಭ್ಯ ವ್ಯವಸ್ಥೆ ಮಾಡುವುದು.
14. ಅವಶ್ಯವಿರುವ ವಿದ್ಯಾರ್ಥಿನಿಯರಿಗೆ ಆಪ್ತ ಸಲಹೆ ನೀಡುವ ಪ್ರಯುಕ್ತ ಆಪ್ತ ಸಲಹಾಗಾರರನ್ನಾಗಿ ಒಬ್ಬರು ಶಿಕ್ಷಕಿಯರನ್ನು/ವಾರ್ಡನ್‌ರವರನ್ನು ಗುರುತಿಸುವುದು.
15. ಮಕ್ಕಳ ಸಹಾಯವಾಣಿ ಸಂಖ್ಯೆ:1098 ಹಾಗೂ ಮಹಿಳಾ ಸಹಾಯವಾಣಿ ಸಂಖ್ಯೆ:1091 ಎಲ್ಲಾ ವಿದ್ಯಾರ್ಥಿನಿಯರಿಗೂ ನೀಡುವುದು.
16. ವಸತಿ ಶಾಲೆಗಳಲ್ಲಿ/ನಿಲಯಗಳಲ್ಲಿ ಚಲನ ವಲನ ವಹಿಯನ್ನು ನಿರ್ವಹಿಸಿ ವಿದ್ಯಾರ್ಥಿನಿಯರ ಮಾಹಿತಿಯನ್ನು ದಾಖಲಿಸುವುದು.
17. ಸ್ವಂತ ಊರುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ತಮ್ಮ ಪೋಷಕರ ಜೊತೆಯಲ್ಲಿ ಕಳುಹಿಸಿಕೊಡುವ ವ್ಯವಸ್ಥೆ ಮಾಡಿಕೊಡುವುದು.
18. ಶಾಲಾ ಕಟ್ಟಡದ ಹೊರಭಾಗದಲ್ಲಿ ವಿದ್ಯುತ್ ದ್ವೀಪಗಳನ್ನು ಅಳವಡಿಸಿ ಉತ್ತಮ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸುವುದು.

**ನಿರ್ವಹಣೆ ಮಾಡಲೇಬೇಕಾದ ಅಂಶಗಳು (Non – Negotiables)**

1. ಈಗಾಗಲೇ ಮೇಲೆ ತಿಳಿಸಿರುವ ಅಂಶಗಳಂತೆ ಕ್ರಮವಹಿಸಿ ವಿದ್ಯಾರ್ಥಿನಿಯರಿಗೆ ಭದ್ರತೆ ಮತ್ತು ಸುರಕ್ಷತೆ ಒದಗಿಸುವುದು.
2. ರಾಜ್ಯ ಕಛೇರಿಯಿಂದ ಈಗಾಗಲೇ ನೀಡಿರುವ ನಿರ್ವಹಣಾ ಕೈಪಿಡಿ ಮತ್ತು ಆಹಾರ ಮುಂತಾದ ಸುತ್ತೋಲೆಗಳಂತೆ ಕಡ್ಡಾಯವಾಗಿ ಪರಿಶುದ್ಧ ಸ್ವಚ್ಛ ಪೌಷ್ಠಿಕಯುಕ್ತ ಗುಣಮಟ್ಟದ ಆಹಾರವನ್ನು ವಿದ್ಯಾರ್ಥಿನಿಯರಿಗೆ ನೀಡುವುದು.
3. ವಿದ್ಯಾರ್ಥಿನಿಯರಿಗೆ ಅವಶ್ಯವಿರುವಷ್ಟು ಶೌಚಾಲಯ ಮತ್ತು ಸ್ನಾನ ಗೃಹಗಳ ಸೌಲಭ್ಯ ಒದಗಿಸಿ ಅವುಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡುವುದು.
4. ವಿದ್ಯಾರ್ಥಿನಿಯರ ಆರೋಗ್ಯ ಕಾಪಾಡಲು ಪ್ರತಿತಿಂಗಳು ಆರೋಗ್ಯ ಮೇಳ ನಡೆಸಿ ಆರೋಗ್ಯದ ಸಮಸ್ಯೆಗಳನ್ನು ಬಗೆ ಹರಿಸುವುದು.
5. ವಿದ್ಯಾರ್ಥಿನಿಲಯಗಳಲ್ಲಿ ಕಡ್ಡಾಯವಾಗಿ ತೂಕದ ಯಂತ್ರ (Weing machine) ಅಳವಡಿಸಿ ಪ್ರತಿ ತಿಂಗಳು ವಿದ್ಯಾರ್ಥಿನಿಯರ ತೂಕವನ್ನು Record ಮಾಡುವುದು.
6. ವಿದ್ಯಾರ್ಥಿನಿಯರಿಗೆ ಅವಶ್ಯವಿರುವ Sanitary Napkins ಗಳನ್ನು ಕಡ್ಡಾಯವಾಗಿ ನೀಡುವುದು.

**KGBV /KKGBV ಗಳಲ್ಲಿ ಪಾಲಿಸಬೇಕಾದ ಹಾಗೂ ಪಾಲಿಸಬಾರದ ಅಂಶಗಳು**

| ‘Do’ | Don’ts |
|---|---|
| 1. ಮಕ್ಕಳ ಹಕ್ಕುಗಳ ರಕ್ಷಣೆ. | 1. ಶಿಸ್ತಿನ ಹೆಸರಿನಲ್ಲಿ ದೈಹಿಕ ಶಿಕ್ಷೆ ಸೇರಿದಂತೆ ಯಾವುದೇ ಸ್ವರೂಪದ ಶಿಕ್ಷೆಯನ್ನು ನೀಡಬಾರದು. |
| 2. ವಿದ್ಯಾರ್ಥಿ ನಿಲಯಗಳಲ್ಲಿ Incinerator ಗಳನ್ನು ಅಳವಡಿಸುವುದು. | 2. ಸಂಬಂಧಿಸಿದ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಶಾಲೆಗಳಲ್ಲಿರುವ ಶಿಕ್ಷಕರ ಹುದ್ದೆಗಳನ್ನು ವರ್ಗಾವಣೆ ಅಥವಾ ನಿಯೋಜನೆಯ ಮೂಲಕ ಭರ್ತಿ ಮಾಡದಿರುವುದು. |
| 3. ಮನೆಯ ವಾತಾವರಣವನ್ನು ವಿದ್ಯಾರ್ಥಿನಿಲಯಗಳಲ್ಲಿ ಕಲ್ಪಿಸುವುದು. | 3. ವಿದ್ಯಾರ್ಥಿನಿಯರ ಭದ್ರತೆ ಮತ್ತು ಸುರಕ್ಷತೆಯ ವಿಷಯಗಳಲ್ಲಿ ನಿರ್ಲಕ್ಷತೆ ತೋರುವುದು. |

| | |
|---|---|
| 4. ವಿದ್ಯಾರ್ಥಿನಿಯರಿಗೆ ಅವಶ್ಯಕತೆಗೆ ತಕ್ಕಂತೆ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ನೀಡುವುದು. | 4. ವಾರ್ಡನ್‌ರವರು/ಮುಖ್ಯ ಶಿಕ್ಷಕರು ಮೇಲಾಧಿಕಾರಿಗಳ ಅನುಮತಿಯಿಲ್ಲದೆ ಕೇಂದ್ರ ಸ್ಥಾನ ಬಿಟ್ಟು ತೆರಳುವುದು. |
| 5. ಶುದ್ಧ ಕುಡಿಯುವ ನೀರನ್ನು ಒದಗಿಸುವುದು. | 5. ಸಂಬಂಧವಿಲ್ಲದ ವ್ಯಕ್ತಿಗಳನ್ನು ವಸತಿನಿಲಯವನ್ನು ಪ್ರವೇಶಿಸಲು ಅನುಮತಿ ನೀಡುವುದು. |
| 6. ಸ್ವಯಂ ಶಿಸ್ತನ್ನು (Self Discipline) ವಿದ್ಯಾರ್ಥಿನಿಯರಲ್ಲಿ ಮೂಡಿಸಲು ಕ್ರಮಗಳನ್ನು ಕೈಗೊಳ್ಳುವುದು. | 6. ಆರೋಗ್ಯ ಮತ್ತು ನೈರ್ಮಲ್ಯದ ವಿಷಯದಲ್ಲಿ ಅನಾಸಕ್ತಿ ತೋರುವುದು. |
| 7. 'ಕಿಶೋರಿ' ಜಾಗೃತ ಶಿಬಿರಗಳನ್ನು ಕಡ್ಡಾಯವಾಗಿ ನಡೆಸುವುದು. | |

ಸಹಿ/–

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಪ್ರತಿಗಳು–ಅಗತ್ಯ ಕ್ರಮಕ್ಕಾಗಿ**

1. ಸಂಬಂಧಿಸಿದ ಉಪನಿರ್ದೇಶಕರ(ಆ)/ಡಿ.ವೈ.ಪಿ.ಸಿ, ಮೂಲಕ ಬಿ.ಇ.ಒ.ಗಳಿಗೆ ಹಾಗೂ ಕೆ.ಕೆ.ಜಿ.ಬಿ.ವಿ. ಮತ್ತು ಕೆ.ಜಿ.ಬಿ.ವಿ ಮುಖ್ಯ ಶಿಕ್ಷಕರಿಗೆ/ವಾರ್ಡನ್‌ಗಳಿಗೆ.

**ಮಾಹಿತಿಗಾಗಿ ವಂದನೆಗಳೊಂದಿಗೆ ಸಲ್ಲಿಸಿದೆ**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾ ಮತ್ತು ಪ್ರೌ.ಶಿ), ಬೆಂಗಳೂರು.
2. ಮಾನ್ಯ ಆಯುಕ್ತರು, ಸಾ.ಶಿ.ಇ., ಬೆಂಗಳೂರು.
3. ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ., ಧಾರವಾಡ ಮತ್ತು ಗುಲ್ಬರ್ಗಾರವರ ಮಾಹಿತಿಗಾಗಿ.
4. ಕಛೇರಿ ಪ್ರತಿ.